# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 302/2024**

ಆರೋಪಿಯ ಹೆಸರುಃ ಸಿರಾಜ

ತಂದೆ ಹೆಸರುಃ ಅಯೂಬ ಖಾನ

ವಯಸ್ಸುಃ 51 ವರ್ಷ

ಉದ್ಯೋಗಃ ಬಸ್ ಕಂಡಕ್ಟರ್

ವಿಳಾಸಃ ಸಾಃ #309, ಜವಳಿಗಲ್ಲಿ, ಶಿರಸಿ ತಾಲೂಕ

## ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?
ಉತ್ತರಃ

ಪ್ರ 2ಃ ಪಿಡಬ್ಲ್ಯೂ 1- ರಾಮಮೂರ್ತಿ ಪ್ರಮೋದ ನಾಯಕ, ಸಾಲ ವಸೂಲಾತಿ ಅಧಿಕಾರಿ, ಫಿರ್ಯಾದಿ ಸುಪ್ರಭಾತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಶಾಖೆಃ ಅಂಕೋಲಾ, ಇವರು ತಮ್ಮ ಸಾಕ್ಷಿಯಲ್ಲಿ ಶ್ರೀಮತಿ ಬೀಬಿ ಜಹೇರಾ ಜಮಾಲ ಖಾನ ಇವರು ದಿಃ 01-10-2021 ರಂದು ಫಿರ್ಯಾದಿ ಸಂಸ್ಥೆಯಿಂದ ವ್ಯವಹಾರದ ಸಲುವಾಗಿ ರೂ.5,00,000/- ಸಾಲವನ್ನು ಪಡೆದಿದ್ದು ಇರುತ್ತದೆ. ಶ್ರೀಮತಿ ಬೀಬಿ ಜಹೇರಾ ಜಮಾಲ ಖಾನ ಮತ್ತು ಜಾಮಿನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಶ್ರೀಮತಿ ಬೀಬಿ ಜಹೇರಾ ಜಮಾಲ ಖಾನ ಇವರು ಅಸಲು ಮತ್ತು ಬಡ್ಡಿ ಸೇರಿ ರೂ. 7,43,300/- ಹಣ ತುಂಬುವುದು ಬಾಕಿ ಇದ್ದಾಗ, ಜಾಮೀನುಗಾರನಾದ ಆರೋಪಿ ದಿನಾಂಕಃ 02-04-2024 ರಂದು ತಾನು ದಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಶಾಖೆಃ ದೇವಿಕೆರೆ ರೋಡ, ಶಿರಸಿ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 495461 ನ್ನು

ರೂ.7,43,300/- ಕ್ಕೆ ನೀಡಿರುತ್ತಾನೆ. ಸದರಿ ಆರೋಪಿ ನೀಡಿದ ಚೆಕ್ಕು ಖಾತೆಯಲ್ಲಿ " **Funds Insufficient**" ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 24/01/2025

**( ಅರ್ಪಿತಾ ಬಿ. ಬೆಲ್ಲದ)**
**ಪ್ರಭಾರ ಪ್ರ ದ ನ್ಯಾದಂ, ಅಂಕೋಲಾ.**